ಶ್ರೀ ಬಿ. ಬೈರಪ್ಪಾಜಿ.—ಹಣ ತಿಂದಿರುವವರಲ್ಲಿ ಅಧಿಕಾರೇತರರು ಸಹ ಸೇರಿಕೊಂಡಿದ್ದಾರೆ, ಅವರು ಅಧ್ಯಕ್ಷರು ಇರಬಹುದು. ಇವರ ಜೊತೆಗೆ ಸರ್ಕಾರದವರು ಕಳಿಸಿಕೊಟ್ಟಂತಹ ಅಡ್ಮಿನಿಸ್ಟ್ರೇಟರ್ ಕೂಡ ಹಣ ತಿಂದಿದ್ದಾರೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಮುಂದೆ ಬರುವವರು ಸಹ ಹಿಂದಿನವರು ಸಾಏರಗಟ್ಟರೆ ಹಣ ತಿಂದಿದ್ದಾರೆಂಕೊಂಡು ತಾವು ಸಹ ತಿನ್ನುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈ ಕಾರಣದಿಂದ ಹಣ ತಿಂದಿರುವವರ ಬಗ್ಗೆ ತ್ವರಿತ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಸಾಧ್ಯವಾದರೆ ಅವರನ್ನು ಜೈಲಿಗೆ ಕಳಿಸಿಕೊಡುವುದಕ್ಕೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಮಾನ್ಯ ಸದಸ್ಯರ ಅಭಿಪ್ರಾಯದಂತೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಕೆಲವರ ಮೇಲೆ ದಾವಾ ಕ್ರಮವನ್ನು ಕೆಲವರ ಮೇಲೆ ಕ್ರಿಮಿನಲ್ ಕ್ರಮವನ್ನು ತೆಗೆದು ಕೊಳ್ಳಲಾಗಿದೆ. ಹಣವೂ ಸಹ ಸ್ವಲ್ಪ ವಸೂಲಿಯಾಗಿದೆ.

ಶ್ರೀ ಟಿ. ಎಂ. ಮಂಜುನಾಥ.—ನುಮಾರು 61 ಸಾವಿರ ರೂಪಾಯಿಗಳಷ್ಟನ್ನು ದುರುಪಯೋಗ ಮಾಡಿರುವ ಕ್ಲಾರ್ಕ್ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ? ಆ ಹಣಕ್ಕೆ ಖಾತರಿ ಏನು ? ಅವರ ಆಸ್ತಿಯನ್ನು ಏನಾದರೂ ಅಟ್ಯಾಚ್ ಮಾಡಿಸಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ದುರುಪಯೋಗವಾದ ಹಣಕ್ಕೆ ಡಿಕ್ರಿಯಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಹಕಾರೀ ಸಂಘಗಳಲ್ಲಿ ಹಣ ದುರುಪಯೋಗ ಮಾಡಿದವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ತಾವೇನೋ ಹಾಕುತ್ತೀರಿ ? ಆದರೆ ತೀರ್ಮಾನವಾಗುವುದರೊಳಗೆ ಅವರು ಫ್ಲಿಡಾರ್ ತೆಗೆದುಕೊಂಡು ನತ್ತುಹೋಗುತ್ತಾರೆ. ಇಂತಹ ಒಂದು ಕೇಸ್ ರಾಮನಗರದಲ್ಲಿ ನಡೆದಿದೆ. ಈ ಕಾರಣದಿಂದ ಇನ್ನು ಮುಂದೆ ಹಣದ ಬಗ್ಗೆ ಏನಾದರೂ ಖಾತರಿ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಇದು ರಾಮನಗರಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ.

ಶ್ರೀ ಬಿ. ಬೈರಪ್ಪಾಜಿ.—ಈ ಸೊಸೈಟಿಯಲ್ಲಿ ಎಚ್. ರಾಮಯ್ಯ ಎಂಬುವರು ಹಣ ದುರುಪಯೋಗ ಮಾಡಿದ್ದಾರೆಂದು ಹೇಳಿದಿರಿ. ಆ ಹಣವನ್ನು ವಸೂಲಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ಅವರಿಂದ 5,500 ರೂಪಾಯಿಗಳ ಬಾಕಿ ಬರಬೇಕು. ಹಿಂದಿನ ಬಾಕಿ ಕೊಡದೆ ಇದ್ದುದಕ್ಕಾಗಿ ಡಿಕ್ರಿ ಆದ ಮೇಲೆ ಅದರ ಬಗ್ಗೆ ಆಪೀಲ್ ಮಾಡಿದ್ದಾರೆ.

Munnor Lift Irrigation Scheme in Buntwal Taluk

206. Sri B. V. KAKKILAYA (Buntwal).—

Will the Minister for Public Works and Electricity be pleased to state :—

(*a*) whether the Munnor Lift Irrigation Scheme in Buntwal Taluk of South Kanara District is in disrepair and has been so always from the very beginning ;

(*b*) whether the pumping machinery had broken down in 1971 ; the delivery pipes are always leaking and there is shortage of power supply ;

(*c*) if so, the steps taken or are contemplated to be taken to set right the defects and made the Scheme work satisfactorily ?

Sri H. M. CHANNABASAPPA (Minister for public Works and Electricity).—

(*a*) No.

(*b*) The pump was functioning and supplying water. But the motor burnt down during the month of April 1971. On account of this, there was break down in the supply of water for a short period. However, the motor was repaired immediately and put to use. The pipes are not always leaking and there is no shortage of power supply.

(*c*) Two small leaks found in the delivery pipe are being repaired.

ಶ್ರೀ ಬಿ. ಎ. ಕಕ್ಕೇರಾಯ.—ಸ್ವಾಮಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 1971ನೇ ಇಸವಿಯ ಏಪ್ರಿಲ್ ಮಾಹೆಯಲ್ಲಿ ಮೋಟಾರು ಕೆಟ್ಟುಹೋಗಿದ್ದಿತು. ಇದರಿಂದಾಗಿ ಅಲ್ಪಕಾಲದವರೆಗೆ ನೀರನ್ನು ಸರಬರಾಜು ಮಾಡಲಿಲ್ಲ. ಸದರಿ ಮೋಟಾರನ್ನು ಕೂಡಲೇ ದುರಸ್ತಿಗೊಳಿಸಿ ಬಳಕೆಗೆ ತರಲಾಯಿತು ಎಂದು ಹೇಳಿದ್ದೀರಿ. ಹಾಗಾದರೆ ಅಲ್ಲಿ ಎಷ್ಟು ಕಾಲದವರೆಗೆ ನೀರು ಸರಬರಾಜು ಮಾಡುವುದಕ್ಕೆ ಆಗಲಿಲ್ಲ ಎಂಬುದನ್ನು ತಿಳಿಸುತ್ತೀರಾ ?

†Sri H. M. CHANNABASAPPA.—That particular period is not available with me.

ಶ್ರೀ ಬಿ. ಎ. ಕಕ್ಕೇರಾಯ.—ಅಲ್ಲಿ ಕಾಪರ್ ವೈರ್ ಸಿಕ್ಕದೆ ಇರುವುದರಿಂದ ಅಲ್ಯೂಮಿನಿಯಂ ವೈರ್ ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದುವೇಳೆ ತೊಂದರೆಯಾಗಬಹುದು ಎಂದು ತಿಳಿದು ಅದನ್ನು ಬದಲಾವಣೆ ಮಾಡಿದ್ದಾರೆಂದು ಅರ್ಥವಾಗುತ್ತದೆ.

Sri M. S. KRISHNAN.—It is replied that the pipes are not always leaking. It means that some times they are leaking.

Sri H. M. CHANNABASAPPA.—That goes without saying.

ಶ್ರೀ ಬಿ. ಎ. ಕಕ್ಕೇರಾಯ.—ಆ ರೀತಿ ಪೈಪು ಲೀಕಾಗುವುದಕ್ಕೆ ಕೆಲವು ಕಾರಣಗಳಿವೆ. ಅಲ್ಲಿ ಯಾವ ಜಮೀನಿಗೆ ಪೈಪ್ ಹಾಕಿಸಿದರೂ ಕೂಡ ಅದನ್ನು ಲೀಕ್ ಮಾಡಿಸಿ ಮೇಲುಗಡೆ ಇದ್ದ ಜಮೀನಿಗೆ ನೀರು ಸಿಕ್ಕದೇ ಇರುವ ಹಾಗೆ ಮಾಡಿದ್ದಾರೆ. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೂ ಮತ್ತು ತಮ್ಮ ಗಮನಕ್ಕೂ ತಂದರೆ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಲಿಫ್ಟ್ ಇರಿಗೇಷನ್ ಯೋಜನೆ ಕೆಲಸ ಮಾಡುವ ಕಾಲದಲ್ಲಿ ಒಂದೊಂದು ವೇಳೆ ಲೀಕ್ ಆಗತಕ್ಕದ್ದು ಸ್ವಾಭಾವಿಕ. ಅದನ್ನು ರಿಪೇರಿ ಮಾಡಬೇಕಾದ್ದು ಅವಶ್ಯಕ. ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಆ ಬಗ್ಗೆ ಕ್ರಮತೆಗೆದುಕೊಳ್ಳುತ್ತಾರೆ.

Bennuthoora Irrigation Project in Gulbarga Taluk

229. Sri PRABHAKER TELKAR (Kalagi).—

Will the Minister of State for Major Irrigation be pleased to state :—

(*a*) when was Bennuthoora Irrigation Project in Gulbarga Taluk sanctioned ;

(*b*) the estimated cost of the Project and the extent of area that would come under irrigation ;